ಅವಳ ಮಾತಿಗೆ ಬ್ರೇಕ್ ಬೀಳಬೇಕೆಂದರೆ ಏಳಲೇಬೇಕೆಂದು ಬೇಗನೆ ಎದ್ದು, ಸುಟ್ಟ ತಂಬಾಕಿನ ಕರಕನ್ನು ಕೈಯಲ್ಲಿ ತೆಗೆದುಕೊಂಡು ಹಲ್ಲುಜ್ಜಲು ಹೋದ. ಅತಿಯಾಗಿ ಸುಟ್ಟ ತಂಬಾಕು ಕಿಕ್ ಕೊಡುವುದಿಲ್ಲವೆಂದು ಮನಸ್ಸಿನಲ್ಲಿ ಬೈದುಕೊಳ್ಳುತ್ತಲೇ ಹಲ್ಲು ತಿಕ್ಕತೊಡಗಿದ. ತಾನು ಕೆಲಸ ಮಾಡುವ ಕಾರ್ಖಾನೆಯ ಮಾಲೀಕನ ನೆನಪಾಗುತ್ತಲೇ ಅವನ ಕೆಲಸಕ್ಕೆ ಒಂದು ವೇಗ ಸಿಕ್ಕಿತು. ಒಂದು ಕಾರ್ಖಾನೆಯಲ್ಲಿ ಆತ ಕಾರಕೂನ. ಕೆಲಸಗಾರರ ಪಗಾರ ಮಾಡುವುದು, ಪಗಾರ ಹಂಚುವುದು, ಪೇ ಶೀಟ್ ನೋಡುವುದು, ಯಾರಿಗಾದರೂ ಹೆಚ್ಚು ಪಗಾರ ಹೋಯಿತಾ ಎನ್ನುವುದನ್ನು ಕಣ್ಣಿಗೆ ಎಣ್ಣೆ ಬಿಟ್ಟು ಹುಡುಕುವುದೇ ಅವನ ಕೆಲಸ. ಒಂದು ಸಾರಿ ಒಬ್ಬರಿಗೆ ಹೆಚ್ಚು ಪಗಾರ ಹೋಗಿದೆ ಎಂದು ಮಾಲೀಕನಿಗೆ ಪ್ರಾಮಾಣಿಕವಾಗಿ ಹೇಳಿದ್ದೇ ದೊಡ್ಡ ತಪ್ಪಾಗಿ, ನಿಮಗೆ ಪಗಾರ ಕೊಡುವುದು ಏತಕ್ಕೆ? ಕಂಪನಿಗೆ ಲಾಸ್ ಮಾಡಲು ಅಲ್ಲ. ನೀವು ಹೇಗಾದರೂ ಮಾಡಿ ಕಾರ್ಮಿಕರಿಗೆ ಕಡಿಮೆ ಪಗಾರ ಸಿಗುವ ಹಾಗೆ ನೋಡಿಕೊಂಡರೆ ನಿಮಗೆ ಬೇಗ ಪ್ರಮೋಷನ್ ಸಿಗುತ್ತೆ, ಗೊತ್ತಾಯ್ತಾ?... ಎಂದು ಸಿಟ್ಟಿನಿಂದ ಹೇಳಿದ್ದರು. ಅಂದಿನಿಂದ ಮಾಲೀಕರ ಜೋಳಿಗೆ ತುಂಬಲು ರೆಡಾರ್‌ನ ಹಾಗೆ ನಾಲ್ಕು ದಿಕ್ಕಿನಿಂದ ಪೇ ಶೀಟ್ ಮೇಲೆ ಕಣ್ಣಾಡಿಸಿ ಯಾರಿಗಾದ್ರೂ ಹೆಚ್ಚಿಗೆ ಪಗಾರ ಹೋಗಿದೆಯೇ ಎಂದು ಹುಡುಕಿ ಅದನ್ನು ಮಾರ್ಕ್ ಮಾಡಿ ಕಡಿಮೆ ಮಾಡುವುದೇ ಕೆಲಸವಾಗಿದೆ. ಅಲ್ಲಿ ಕೆಲಸದವರು ತಮ್ಮ ಪಗಾರವನ್ನು ದಿನದಿಂದ ದಿನಕ್ಕೆ ಲೆಕ್ಕ ಹಾಕುತಿದ್ದರೆ ಇಲ್ಲಿ ನಾವು ಅವರ ಪಗಾರ ಕಡಿಮೆ ಮಾಡುವ ಕುರಿತು ಲೆಕ್ಕ ಹಾಕುವುದು. ಇಬ್ಬರ ಕಡೆಯಿಂದಲೂ ಬೈಯಿಸಿಕೊಳ್ಳುವುದಂತೂ ತಪ್ಪುವುದಿಲ್ಲ. ಮಗ ಅಳುವ ಸದ್ದು ಒಮ್ಮೆಲೇ ಅವನನ್ನು ಮತ್ತೆ ಈ ಲೋಕಕ್ಕೆ ಕರೆದುಕೊಂಡು ಬಂತು. ಮನೆ ಹೊರಗಡೆಯಿಂದಲೇ ಇಣುಕಿ ನೋಡಿದ. ಈಗ ತಾನೇ ಹಾಸಿಗೆಯಿಂದ ಎದ್ದ ಮಗ ಹಸಿವಿನಿಂದ ಅಳುತ್ತಿದ್ದರೆ, ತಾಯಿ ಮಗನ ಬೆನ್ನ ಮೇಲೆ ಪೆಟ್ಟಿನ ಮೇಲೆ ಪೆಟ್ಟು ಹಾಕುತ್ತಿದ್ದಾಳೆ.

"ಏ ಅವನನ್ನೇಕೆ ಹಾಗೆ ಹೊಡೆಯುತ್ತೀ?" ಬಾಯಲ್ಲಿನ ತಂಬಾಕನ್ನು ಗಟಾರಿನಲ್ಲಿ ಉಗುಳುತ್ತಾ ಕೇಳಿದ.

"ಪಾವ್ ಬೇಕಂತೆ... ಚಪಾತಿಗೆ ತುಟಿ ಹಚ್ಚುತ್ತಿಲ್ಲ ನೋಡಿ ನಿಮ್ಮ ಮಗ."

ಅಳುವುದನ್ನು ನಿಲ್ಲಿಸದೇ ಇರುವ ಮಗನ ಕಡೆ ಧಾವಿಸಿ ನೋಡುತ್ತಾನೆ. ಮಗನ ಮುಂದೆ ತೊನ್ನಿನ ಮನುಷ್ಯನ ಹಾಗೆ ಅಲ್ಲಲ್ಲಿ ಕಪ್ಪಾಗಿರುವ, ಅಲ್ಲಲ್ಲಿ ಬಿಳಿಯಾಗಿರುವ ಎಣ್ಣೆ ಹಚ್ಚದೆ ಇರುವ ಚಪಾತಿಗಳಿವೆ. ಪಾವ್ ಇದ್ದರೆ ಖುಷಿಯಿಂದ ತಿನ್ನುತ್ತಾ ಓಡಾಡುವ ಮಗನ ಆನಂದಭರಿತ ಮುಖ ಅವನಿಗೆ ನೆನಪಾಗುತ್ತದೆ.

ತಿಂಗಳ ಕೊನೆಯ ದಿನಗಳೆಂದರೆ ಅವು ಜೀವ ಹಿಂಡುವ ದಿನಗಳು. ಮನೆಯಲ್ಲಿ ದುಡ್ಡಿನ ಕೊರತೆ ಉಂಟಾದರೆ ಮನೆಯ ವರ್ತಮಾನ ಬದಲಾಗಿ ಮನೆ ಬೈರಾಗಿಯ ಹಾಗೆ ಕಾಣತೊಡಗುತ್ತದೆ. ಪಗಾರ ಆದ ಒಂದೆರಡು ವಾರ ಮನೆ ಪುಂಗಿಯ ಸದ್ದಿಗೆ ನಾಗರ ನರ್ತಿಸಿದಂತೆ ನರ್ತಿಸುತ್ತದೆ.

"ಪಗಾರ ಮುಗಿದೊಯ್ತಾ'' ಏನಾದ್ರೂ ಮಾತನಾಡಬೇಕೆಂದು ಹೆಂಡತಿಯ ಕಡೆ ಮುಖ ಮಾಡಿ ಕೇಳುತ್ತಾನೆ.

"ಮುಗಿದು ಹೋಗಿದೆ... ನನ್ನನ್ನೂ ಬಜಾರ್‌ನಲ್ಲಿ ಮಾರಿ ಬಿಡಿ" ಎಂದು ಸಿಟ್ಟಿನಿಂದ ಚೀರುತ್ತಾಳೆ.

"ಮನೆಯಲ್ಲಿ ತಿನ್ನುವವರ ಸಂಖ್ಯೆ ಎಷ್ಟಿದೆ? ತಿಂಗಳ ಮೊದಲನೇ ತಾರೀಖು ಪಗಾರ ತಂದು ನನ್ನ ಮೇಲೆ ಎಸೆದು ನೀವು ನಿರಾಳವಾಗಿ ಬಿಡುತ್ತೀರಿ. ಇಡೀ ತಿಂಗಳು ನಾನು ಹೆಣಗುತ್ತಿದ್ದರೆ ನೀವು ಮಾತ್ರ ಆರಾಮಾಗಿ ಮಜದಲ್ಲಿ ಇರುತ್ತೀರಿ..." ಎಂದು ಒಂದೇ ಸಮನೆ ಬಯ್ಯಲು ತೊಡಗಿದಳು.

ಇವಳ ಮುಂದೆ ನಾನು ತಡಿಯುವುದಿಲ್ಲವೆಂದು ಮನಸ್ಸಿನಲ್ಲಿ ಅಂದುಕೊಂಡು ತಲೆ ಕೆಳಗೆ ಮಾಡಿ ಸ್ನಾನ ಮಾಡುತ್ತಾ, ನೀರು ಇವತ್ತೇ ಇಷ್ಟು ಬಿಸಿಯಾಗಬೇಕಾ? ಅವಳನ್ನು ಕೇಳಿದರೆ